ಹಳಬರು ವಾಮನ ಶರೀರವನ್ನು ತ್ರಿವಿಕ್ರಮವಾಗಿಸಿ, ಬದಿಗೆ ಬ್ಯಾಗಿಟ್ಟು, ಮಡಿಲಲ್ಲಿದ್ದ ಮಗುವನ್ನು ಸೀಟಿನ ಮೇಲೆ ಮಲಗಿಸಿ, ನೋವೆಕನ್ನಿ ಸೂಚನೆ ಕೊಡುವರು. ಅಂಕದ ಪರದೆ ಮೇಲೇಳುತ್ತದೆ. ಆದರೆ ಬಂದವರೇನು ಕಿವಿಗೆ ಹೂವಿಟ್ಟುಕೊಂಡವರಲ್ಲ.

''ಅಣ್ಣಯ್ಯಾ, ಎತ್ತುನಿನ್ನ ತಳಾನ, ನಾನಲ್ಲಿ ಟವಲ್ ಹಾಕೀನಿ.''

''ನಿನಕಿಂತ ಮೊದಲು ಬಂದವ ನಾನಪ್ಪ. ಬೇಕಾರ ಈಯಮ್ಮನಿಗೆ ಕೇಳು.''

''ನನ್ನ ಟವಲ್ ಯಾರ ಕೇಳಿ ಮುಟ್ಟಿದೆ?''

''ಯಾಕಪಾ? ಅದಕ್ಕೇನು ಮುತ್ತು ಬಿಗಿಸಿಯಾ?''

''ಆಂಟಿ, ಬ್ಯಾಗ ತಗದು ಮ್ಯಾಲಿಡ್ರಿ. ಮಗೀನ ತೊಡೀಮ್ಯಾಲೆ ಇಟ್ಗೋರಿ. ಮನ್ಯಾಗ ಕುತ್ಕಂಡಂಗ ಕುಂತರ ಹೆಂಗ? ಎಬ್ಬಸರಿ ಅವರನ್ನ.''

(ಜಾಗ ಕೊಡಲು ಸಿದ್ಧವಿದ್ದ ಆಕೆ, ಆಂಟಿ ಶಬ್ದದಿಂದ ಇರಿಸುಮುರಿಸುಗೊಂಡು) ''ಇಲ್ರೀ, ಅವರಿಗೆ ಆರಾಮಿಲ್ಲ.''

''ಆರಾಮ ಇಲ್ದೋರು ರಿಜರ್ವೇಶನ್ನಾಗ ಹೋಗಬೇಕು. ಕಾರು ಮಾಡಕೊಂಡು ಬರಬೇಕು. ಜನರಲ್ ಡಬ್ಬಿಯಿದು. ಎಬ್ಬಸರಿ.''

''ನಾವು ಬಳ್ಳಾರಿಯಿಂದ ನಿಂತ ಬಂದೀವ್ರಿ. ಈಗಷ್ಟೆ ಸೀಟು ಸಿಕ್ಕದ.''

''ಹಂಗಂದ್ರೆ ಹೆಂಗ್ರಿ? ನಾಕು ಸೀಟಿನಾಗೆ ಮೂವರು ಕುಂತೀರಿ. ಸ್ವಲ್ಪ ಜರಕೋರಿ.''

ಸೀಟು ಸಿಗದವರು ಒಳಗೇ ಉರಿಯುತ್ತ 'ತಿಕೇಟಿಗೆ ನಾವು ಕಲ್ಲುಳ್ ಕೊಟ್ಟೇವಪ್ಪ. ಅವರು ರೊಕ್ಕ ಕೊಟ್ಟಾರ. ಅದಕೇ ಆರಾಂ ಕುಂತಾರ.' 'ಗಾಡೀನೇ ಖರೀದಿ ಮಾಡದೋರಂಗ ಆಡ್ತಾರ.' 'ಗೂಟ ಹೊಡ್ಕಂಡು ಇಲ್ಲೇ ಇರ್ತಾರೊ ಏನೊ?' ಇತ್ಯಾದಿ ಗೊಣಗುವರು. ಪಿಸುನುಡಿಯ ಸೂಜಿ ಸಂಬಂಧಪಟ್ಟವರಿಗೆ ಹೋಗಿ ನಡುತ್ತದೆ. ''ಯಾರ್ರೀ ಅದು? ಜರ ಹಲ್ಲಹಿಡಿದ ಮಾತಾಡ್ರಿ. ಯಾರೇನೂ ಗೂಟ ಹೊಡ್ಕೊಂಡು ಇರಂಗಿಲ್ಲ. ತಮ್ ಟೇಶನ್ ಬಂದಕೇಸಿ ಇಳದು ಹೋಗೋರು. ನಿಮಗೆ ಸೀಟುಬೇಕಲ್ಲ. ಬರ್ರಿ ಕುತಗೋರಿ.'' ಆಗ ಸೀನಿಯರ್ ಪಯಣಿಗನೊಬ್ಬ ಸ್ವಘೋಷಿತ ನ್ಯಾಯಾಧೀಶನಾಗಿ ಅಡ್ಜೆಸ್ಟ್‌ಮೆಂಟ್ ತತ್ವವನ್ನು ಬೋಧಿಸುವನು. ಈ ನಡುವೆ ದೊಡ್ಡವರ ಸೀಟುಕದನ ನೋಡಲಾರದ ತರುಣನೊಬ್ಬ ಅಟ್ಟಣಿಗೆ ಮೇಲೆ ಕೂರಲು ಜಿಗಿಯುವನು. ಅವನಿಗೆ ಕೆಳಗಿರುವ ಕನ್ನೆಯರನ್ನು ಕಣ್ತುಂಬಿಕೊಳ್ಳುವ ಇರಾದೆಯೂ ಇಲ್ಲದಿಲ್ಲ. ಆದರೆ ಶಕ್ತಿಪ್ರದರ್ಶನದ ಭರದಲ್ಲಿ ಮಹಿಳೆಯೊಬ್ಬರ ತಲೆಗೆ ಕಾಲು ತಾಗುವುದು.

''ಏ ಬುದ್ಧಿಗೇಡಿ, ಹೊಟ್ಟೆಗೇನ್ ತಿಂತೀ? ಕಾಲ ಬಡಿಸಿದೆಯಲ್ಲ ತಲೀಗ.''

''ಸಾರೀರಿ. ಕಾಣಲಿಲ್ಲ.''

''ಏನು ಸಾರಿ? ಕಣ್ಣುನೆತ್ತಿಗೆ ಬಂದಾವ ನಿಮಗ. ಮನ್ಯಾಗ ಅಕ್ಕತಂಗಿ ಅದಾರೋ ಇಲ್ಲವೊ?''

''ಇಲ್ರೀ.'' (ಕನ್ನೆಯರು ಕಿಸಕ್ಕನೆ ನಗುವರು).

ರೈಲು ಚಲಿಚಲಿಸುತ್ತ ಯುದ್ಧಪರ್ವ ಮುಗಿದು ಕದನವಿರಾಮ ಘೋಷಣೆಯಾಗುವುದು; ಪರಸ್ಪರರ ಮುಖ ಕಣ್ಣು ಭೇಟಿಯಾಗುತ್ತ ಶಾಂತಿಪರ್ವ ಮುನ್ನುಡಿ ಬರೆಯುವುದು. ಎದೆಯಾಳದಲ್ಲಿರುವ ಮನುಷ್ಯತ್ವ ಚಿಲುಮೆ ಬಿರುಸು ನೆಲವನ್ನು ಸೀಳಿಕೊಂಡು ಒಸರುವುದು. ಕೂತವರು ದೇಹವನ್ನು ಮೂಲಾಕೃತಿಗೆ ತಂದುಕೊಂಡು ನಿಂತವರಿಗೆ ಜಾಗ ಕಲ್ಪಿಸುವರು. ಅವರಲ್ಲಿದ್ದ ಕೂಸನ್ನು 'ಅಕ್ಕ ಇಲ್ಕೊಡು. ತೊಡಿಮ್ಯಾಲ ಕುಂದ್ರತೈತಿ' ಎಂದು ಕಸಿದುಕೊಳ್ಳುವರು. ಅಪರಿಚಿತರ ತೆಕ್ಕೆಗೆ ಹೋಗಲಾರದೆ ಕೂಸು ಕಿಟಾರನೆ ಅಳುವುದು. ಬಹುಶಃ ಸೀಟು ಗಿಟ್ಟಿಸಲು